ಕರ್ನಾಟಕ ಸರ್ಕಾರ
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/20/ರ.ಪು./ಉಗ್ರಾಣ/2015-16

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:19-07-2018

## ಸುತ್ತೋಲೆ

ವಿಷಯ :ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶುಲ್ಕ ವಸೂಲಾತಿ ಹಾಗೂ ಮರು ಜಮೆ ಬಗ್ಗೆ.

*****

ರಾಜ್ಯ/ ಕೇಂದ್ರ ಸರ್ಕಾರಗಳು ನಗದು ವ್ಯವಹಾರವನ್ನು ಕನಿಷ್ಠ ಮಟ್ಟಕ್ಕೆ ಸೀಮಿತಗೊಳಿಸಿರುವುದರಿಂದ ಹಾಗೂ ನಗದು ರಹಿತ ವ್ಯವಹಾರಕ್ಕೆ ಕಾರ್ಯೋನ್ಮುಖವಾಗಿರುವ ಹಿನ್ನೆಲೆಯಲ್ಲಿ ಹಾಗೂ ಆಡಳಿತ/ ಶುಲ್ಕ ವಸೂಲಾತಿ/ ಮರು ಜಮೆಯಲ್ಲಿ ಪಾರದರ್ಶಕತೆ ಜಾರಿಗೆ ತರುವುದು ಅತ್ಯಗತ್ಯವಾಗಿರುತ್ತದೆ. ಬಹುತೇಕ ಕಾಲೇಜುಗಳ ಪ್ರಾಂಶುಪಾಲರುಗಳು ವಿದ್ಯಾರ್ಥಿಗಳಿಂದ ಶುಲ್ಕ ವಸೂಲಾತಿಯನ್ನು ಬ್ಯಾಂಕ್ ಚಲನ್ ಮೂಲಕ ಸಂಬಂಧಿಸಿದ ಕಾಲೇಜಿನ ಖಾತೆಗೆ ವಿದ್ಯಾರ್ಥಿಗಳಿಂದ ಸಂದಾಯ ಮಾಡಿಸಿ ನಂತರ ಸರ್ಕಾರಿ ಮರು ಜಮೆಯನ್ನು ಖಜಾನೆ-2(ಕೆ2) ಮೂಲಕ ಹಾಗೂ ಅರೆ-ಸರ್ಕಾರಿ ಮತ್ತು ವಿಶ್ವವಿದ್ಯಾಲಯದ ಜಮೆಯನ್ನು ನೆಫ್ಟ್/ ಆರ್.ಟಿ.ಜಿ.ಎಸ್/ ಚಲನ್/ ಡಿ.ಡಿ. ಮೂಲಕ ಜಮೆ ಮಾಡುತ್ತಿರುತ್ತಾರೆ. ಆದರೆ, ಕೆಲವೊಂದು ಕಾಲೇಜುಗಳ ಪ್ರಾಂಶುಪಾಲರುಗಳು ಮಾತ್ರ ವಿದ್ಯಾರ್ಥಿಗಳಿಂದ ಹಳೆ ಪದ್ಧತಿಯಲ್ಲಿ ರಸೀದಿ ಹಾಕುವ ಮೂಲಕ ನಗದು ಸ್ವೀಕರಿಸುತ್ತಿದ್ದು ನಂತರ ಹಣ ದುರುಪಯೋಗ ಆಗಿರುವ ಬಗ್ಗೆ ಈ ಕಛೇರಿಯಲ್ಲಿ ದೂರುಗಳು ಸ್ವೀಕೃತವಾಗಿರುತ್ತವೆ.

ಈ ಹಿನ್ನೆಲೆಯಲ್ಲಿ ಶುಲ್ಕ ವಸೂಲಾತಿಯಲ್ಲಿ ಚಲನ್ ಪದ್ಧತಿಯನ್ನು ಅಳವಡಿಸಿಕೊಳ್ಳದೇ, ಹಳೆ ಪದ್ಧತಿ ಅಂದರೆ ರಸೀದಿ ಮೂಲಕ ನಗದು ಸ್ವೀಕರಿಸಿ ಜಮೆ ಮಾಡುತ್ತಿರುವ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಬ್ಯಾಂಕ್‌ಗಳಲ್ಲಿ ಈಗಿರುವ ಕಾಲೇಜಿನ ಖಾತೆಗಳಿಗೆ ಚಲನ್ ಮೂಲಕ ಎಲ್ಲಾ ಶುಲ್ಕಗಳನ್ನು ವಿದ್ಯಾರ್ಥಿಗಳಿಂದ ಜಮೆ ಮಾಡಿಸಿ ನಂತರ ಸರ್ಕಾರಿ ಜಮೆಯನ್ನು ಖಜಾನೆ-2ರ ಮೂಲಕ, ಅರೆ-ಸರ್ಕಾರಿ/ ವಿಶ್ವವಿದ್ಯಾಲಯದ ಜಮೆಯನ್ನು ನೆಫ್ಟ್/ ಆರ್.ಟಿ.ಜಿ.ಎಸ್/ ಚಲನ್/ ಡಿ.ಡಿ. ಮೂಲಕ ಪಾವತಿಸಲು ಹಾಗೂ ನಗದು ವ್ಯವಹಾರವನ್ನು ತಕ್ಷಣದಿಂದಲೇ ನಿಲ್ಲಿಸುವಂತೆ ಕಡ್ಡಾಯವಾಗಿ ಸೂಚಿಸಿದೆ.

ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ತಮ್ಮ ವ್ಯಾಪ್ತಿಯ ಯಾವ ಕಾಲೇಜುಗಳಲ್ಲಿ ಚಲನ್ ಪದ್ಧತಿ ಅಳವಡಿಸಿಕೊಂಡಿಲ್ಲವೆಂಬ ಮಾಹಿತಿ ಸಂಗ್ರಹಿಸಿ ಅಳವಡಿಸಿಕೊಳ್ಳದೇ ಇರುವ ಕಾಲೇಜುಗಳಲ್ಲಿ ತುರ್ತಾಗಿ ತಮ್ಮ ಹಂತದಲ್ಲಿ ಕ್ರಮ ಕೈಗೊಳ್ಳಲು ಸೂಚಿಸುತ್ತಾ, ಈ ಬಗ್ಗೆ ಈ ಕಛೇರಿಗೆ ವರದಿ ನೀಡಲು ತಿಳಿಸಿದೆ.

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ,

1. ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
2. ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ
3. ನೋಡಲ್ ಅಧಿಕಾರಿ, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ
4. ಕಛೇರಿ ಪ್ರತಿ